


ನಿಮ್ಮ ಕರೆ ನಮ್ಮಿಬ್ಬರಿಗೂ ಬಹಳ ಮುಖ್ಯ!

ಹೀಗೆ ನಮ್ಮ ನೆನಪಿನ ಸಾಗರದಲ್ಲಿ ಗಾಳ ಹಾಕಿದಾಗ ಮೊದಲು ಸಿಗುವ ದೊಡ್ಡ ಮೀನು ಯಾರೋ ನಮಗೆ ಗಾಸಿ ಮಾಡಿದ ಪ್ರಸಂಗ. ಅದರ ನೆನಪು, ಆ ಪ್ರಸಂಗವೂ ಧುತ್ತೆಂದು ಮತ್ತೆ ನಮ್ಮ ಮುಂದೆ ನಡೆದಂತೆ ಭಾಸವಾಗಿ ಮನಸ್ಸು ಕದಡಿದ ರಾಡಿಯಾಗುತ್ತದೆ; ಆಕ್ರೋಶಗೊಳ್ಳುತ್ತದೆ. ಆಗ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು ಸ್ವಲ್ಪ ಆಲೋಚಿಸಿ. ಆ ಪ್ರಸಂಗವೂ ನಡೆದ ಸಮಯ, ಸಂದರ್ಭ, ಸನ್ನಿವೇಶವನ್ನು ಕುರಿತು ಚಿಂತಿಸಿ. ಅಂದು ಅದಕ್ಕೆ ನಮ್ಮ ಪ್ರತಿಸ್ಪಂದನವನ್ನು, ಆಗ ನಮಗೆ ಶೇಕಡಾ 200 ಸರಿ ಎನ್ನಿಸಿದ್ದ ಪ್ರತಿಸ್ಪಂದನವನ್ನು ನೆನಪಿಸಿಕೊಳ್ಳಿ.

ಇಂದು, ಆಗ ನಡೆದ ಘಟನೆಯನ್ನು ನಡೆಯದಂತೆ ಮಾಡಲು ಸಾಧ್ಯವಿಲ್ಲ. ಆದರೆ ಅದಕ್ಕಾಗಿ ನಾವು ಇಂದೂ ತಳೆಯುವ ರೋಷ, ಕೋಪ, ತಾಪಗಳಿಂದ ಕಳಚಿಕೊಳ್ಳಬಹುದು. ಅಂದಿನ ಘಟನೆಗೆ ಕಾರಣರಾದವರನ್ನು ಮನಸ್ಸಿನಲ್ಲೇ ಬೇಷರತ್ತಾಗಿ ಕ್ಷಮಿಸಿಬಿಡೋಣ. ಅವರು ಮತ್ತೆ ಸಿಕ್ಕಾಗ 'ನನ್ನನ್ನು ಕ್ಷಮಿಸಿಬಿಡಿ' ಎಂದು ಕೇಳುವ ಧೈರ್ಯ ತಾನಾಗೇ ಬರುತ್ತದೆ. ಹಾಗೇ ಮನಸ್ಸಿನಲ್ಲೇ ಅವರಿಂದ ಕ್ಷಮೆಯನ್ನು ಯಾಚಿಸಿಬಿಡೋಣ. ಅನಂತರ ನೋಡಿ, ರಾಡಿ ಹೇಗೆ ತಿಳಿಯಾಗುತ್ತದೆ ಎಂದು. ಅಷ್ಟು ಸಾಕು, ನಮ್ಮ ನೆನಪಿನ ಸಾಗರವು ತಳ ಕಾಣುವ ತಿಳಿಗೊಳವಾಗಲು. ಹೀಗೆ ಗಾಳ ಹಾಕಿದಾಗ ಮನಸ್ಸಿಗೆ ಕಚಗುಳಿ ಇಡುವ, ಮುದ ನೀಡುವ ಮೀನುಗಳೂ ಸಿಗುತ್ತವೆ. 'ಯಾಕೆ ಒಬ್ಬರೇ ನಕ್ಕೋತಾ ಇದೀರಾ? ಏನು ಜ್ಞಾಪಕಕ್ಕೆ ಬಂತು?' ಎಂದು ನಿಮ್ಮ ಜೊತೆಗಾತಿಯೋ ಜೊತೆಗಾರನೋ ಬೇಟದಿಂದ ಕೇಳಿದರೆ, ನಿಮಗೆ ಒಂದು ಮೀನು ಸಿಕ್ಕಿದೆ ಎಂದೇ ಅರ್ಥ!

ಈಚೆಗೆ ನನಗೆ ಹಾಗೆ ಆಯಿತು. ನಾನು ಹಿಂದೆ ಓದಿದ್ದ ಲಲಿತ ಪ್ರಬಂಧಗಳ ಒಂದು ಪುಸ್ತಕ ಥಟ್ಟನೆ ನೆನಪಿಗೆ ಬಂತು. ಅದು ನಾನು ಚಿಕ್ಕಂದಿನಲ್ಲಿ ಅಂದರೆ ಪ್ರೌಢಶಾಲೆಯಲ್ಲಿದ್ದಾಗ ಓದಿದ ಒಂದು ಪುಸ್ತಕ. ಬಹುಶಃ ಅದನ್ನು ಬರೆದವರ ಹೆಸರು ಗೋವಿಂದರಾವ್. ಪುಸ್ತಕದ ಹೆಸರು ನನ್ನ ನೆನಪಿಗೆ ಬರುತ್ತಿಲ್ಲ. ಅದರಲ್ಲಿ ಇದ್ದಂತಹ ಕೆಲವು ಲೇಖನಗಳ ಬಗ್ಗೆ ಸ್ಥೂಲವಾಗಿ ನಿಮಗೆ ತಿಳಿಸುತ್ತೇನೆ. ಒಂದು ಲೇಖನದಲ್ಲಿ ಲೇಖಕರು ಆಗತಾನೆ ಮದುವೆಯಾಗಿ ಹೆಂಡತಿಯನ್ನು ಕರೆದುಕೊಂಡು ತಮ್ಮ ಊರಿಗೆ ಬಂದಿರುತ್ತಾರೆ. ಆತ ಕಾಲೇಜಿನಲ್ಲಿ ಅಧ್ಯಾಪಕರು. ಬಂದ ಮಾರನೆಯ ದಿನ ಕಾಲೇಜಿಗೆ ಹೋಗುವಾಗ, ಹೆಂಡತಿಗೆ: 'ನಾನು ಬಹಳ ಪ್ರಸಿದ್ಧನಾದ ವ್ಯಕ್ತಿ. ನನ್ನನ್ನು ಹುಡುಕಿಕೊಂಡು ಅನೇಕರು ಬರುತ್ತಿರುತ್ತಾರೆ. ಗೆಳೆಯರು ಗೋವಿಂದ ಎಂದೇ ನನ್ನನ್ನು ಕರೆಯುವುದು. ಹಾಗೆ ಯಾರಾದರೂ ಬಂದರೆ, ಅವರಿಗೆ ನಾನು ಕಾಲೇಜಿಗೆ ಹೋಗಿದ್ದೇನೆ. ಸಂಜೆಯ ಮೇಲೆ ಬನ್ನಿ. ಎಂದು ಹೇಳಿ ಬಿಡು' ಎಂದು ತಿಳಿಸುತ್ತಾರೆ.

ಸಂಜೆ ಮನೆಗೆ ಬಂದಾಗ ಹೆಂಡತಿಯನ್ನು ಕೇಳುತ್ತಾರೆ: 'ಯಾರಾದರೂ ನನ್ನನ್ನು ಹುಡುಕಿಕೊಂಡು ಬಂದಿದ್ದರೇ?' ಹೆಂಡತಿ, 'ಹೌದು, ನಾಲ್ಕು ಜನ ಬಂದಿದ್ದರು.' ಗಂಡನಿಗೆ ಆಶ್ಚರ್ಯ ಮತ್ತು ಸಂತೋಷ. ಜೊತೆಗೆ ನನ್ನ ಪ್ರತಿಭೆ ನನ್ನ ಹೆಂಡತಿಗೆ ಇಷ್ಟು ಬೇಗ ಗೊತ್ತಾಯಿತಲ್ಲ ಎಂಬ ಖುಷಿ. 'ಹೌದಾ ಯಾರ್ಯಾರು ಬಂದಿದ್ದರು' ವಿಚಾರಿಸುತ್ತಾರೆ.



ಅದಕ್ಕೆ ಹೆಂಡತಿಯ ಉತ್ತರ: 'ಒಬ್ಬ ಭಿಕ್ಷುಕ, ಮೂವರು ದಾಸಯ್ಯಗಳು ಗೋವಿಂದ, ಗೋವಿಂದ ಅಂತ ನಿಮ್ಮನ್ನು ಹುಡುಕಿಕೊಂಡು ಬಂದಿದ್ದರು. ಸಂಜೆ ಬನ್ನಿ ಎಂದು ಹೇಳಿದ್ದೇನೆ. ಇನ್ನೇನು ಬರಬಹುದು.'

ಮತ್ತೊಂದು ಲೇಖನದಲ್ಲಿ, ಅಷ್ಟೇನೂ ಓದಿರದ ಹೆಂಡತಿ ಮದುವೆಯ ನಂತರ ಮೊದಲನೆಯ ಬಾರಿಗೆ ತನ್ನ ತವರುಮನೆಗೆ ಹೋಗಿರುತ್ತಾಳೆ. ಕಾಗದ ಬರೆಯುತ್ತಿರಬೇಕೆಂದು, ಕ್ಷೇಮ ಸಮಾಚಾರವನ್ನು ತಿಳಿಸುತ್ತಿರಬೇಕೆಂದು ಗಂಡ ಹೇಳಿರುತ್ತಾನೆ.

ಅಷ್ಟಾಗಿ ಓದಿರದ ಹೆಂಡತಿಗೆ ಬರವಣಿಗೆಯು ಬಹಳ ಕಷ್ಟ ಸಾಧ್ಯ. ಎಷ್ಟು ದಿನವಾದರೂ ಕಾಗದ ಬರದಿದ್ದಾಗ, ಗಂಡನೇ ಅವಳಿಗೆ ಕಾಗದ ಬರೆಯುತ್ತಾನೆ. ಕೊನೆಯಲ್ಲಿ ಬೇಗ ಉತ್ತರಿಸು ಎಂದು ತಿಳಿಸಿರುತ್ತಾನೆ. ಪ್ರೇಮಪತ್ರವನ್ನು ನಿರೀಕ್ಷಿಸಿದ್ದ ಗಂಡನಿಗೆ ಕಾಗದ ಬರುತ್ತದೆ.

'ನೀವು ನಿಮ್ಮ ಕಾಗದದಲ್ಲಿ ಬರೆದಿರುವ ಯಾವ ವಿಚಾರವೂ ನನಗೆ ಗೊತ್ತಾಗಲಿಲ್ಲ. ಮನೆಯಲ್ಲಿ ಹಿರಿಯರಿಗೆ ತೋರಿಸಿದಾಗ ಅವರು ಅದನ್ನು ನೋಡಿ, ಕಾಗದವನ್ನು ನಾನೇ ಓದಿಕೊಳ್ಳಬೇಕು ಎಂದು ಹೇಳಿದರು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ನೀವು ಕ್ಷೇಮವೇ? ನಮ್ಮ ಮನೆಯಲ್ಲಿ ಹಸು ಕರುವನ್ನು ಹಾಕಿದೆ. ನಿಮ್ಮ ಮನೆಯಲ್ಲೂ ಹಾಕಿದೆಯೇ? ನನ್ನ ಸೋದರತ್ತೆಯ ಮಗಳು ಗಂಡುಮಗುವನ್ನು ಹೆತ್ತಿದ್ದಾಳೆ. ನಮಗೆ ಪುಡುರು. ನಿಮಗೂ ಪುಡುರಾ?'

ಹೀಗೆ ಆ ಪ್ರೇಮಪತ್ರವು ವ್ಯಾಕರಣದ ಹಾಗೂ ಕಾಗುಣಿತ ದೋಷಗಳಿಂದ ಕೂಡಿರುತ್ತದೆ. ಅದನ್ನು ಓದುವಾಗ ಬರುವ ಬೇರೆ ಬೇರೆ ಅರ್ಥಗಳು ನಮ್ಮನ್ನು ನಗೆಗಡಲಲ್ಲಿ ಮುಳುಗಿಸುತ್ತವೆ.

ಮತ್ತೊಂದು ಲೇಖನದಲ್ಲಿ, ಲೇಖಕರು ಎಲ್ಲ ವಿಷಯಗಳ ಪರೀಕ್ಷೆಗೂ ಚೆನ್ನಾಗಿ ತಯಾರಾದರು. ಕನ್ನಡದ ಬಗ್ಗೆ 'ಕನ್ನಡ ತಾನೆ, ಪರೀಕ್ಷೆಯ ದಿನ ನೋಡಿದರಾಯ್ತು' ಅಂದುಕೊಂಡು ಸುಮ್ಮನಿರುತ್ತಾರೆ. ಪರೀಕ್ಷೆಯ ದಿನ ಕೈಗೆ ಬಂದ ಕನ್ನಡದ ಪ್ರಶ್ನೆಪತ್ರಿಕೆಯನ್ನು ನೋಡಿ ಉತ್ತರಿಸಲು ತೊಡಗುತ್ತಾರೆ. ಅದರಲ್ಲಿ ಯಾವ ಪ್ರಶ್ನೆಗೂ ಉತ್ತರ ಕೊಡಲು ಆಗುವುದಿಲ್ಲ. ಕೊನೆಗೆ 'ಪದ ವಿಭಾಗ ಮಾಡಿ ಅರ್ಥ ತಿಳಿಸಿ' ಎಂದು ಕೊಟ್ಟಿದ್ದ ಕಾವ್ಯಭಾಗವನ್ನು ಓದಲಾರದೆ ನೋಡಿದಾಗ ಅವರ ಕಣ್ಣಿಗೆ ಬಿದ್ದದ್ದು, 'ಎಂದೊಡಿಂತೆಂದಂ' ಎಂಬ ಭಾಗ. ಅದನ್ನು ನೋಡಿ ಸಂತೋಷದಿಂದ ಆ ಪದ್ಯಕ್ಕೆ ಅರ್ಥವನ್ನು ಬರೆಯಲು ಪ್ರಾರಂಭಿಸುತ್ತಾರೆ. ಅವರ ಪ್ರಕಾರ, ಎಂದೊಡಿಂತೆಂದಂ ಎಂಬುದನ್ನು ಕವಿಯು ಬಹಳ ಚೆನ್ನಾಗಿ ವಿವರಿಸಿದ್ದಾನೆ ಎಂದು ಹೇಳುತ್ತಾ ಹೀಗೆ ಪದ ವಿಭಾಗ ಮಾಡುತ್ತಾರೆ:

'ಎಂದೊಡಿಂತೆಂದಂ' ಎಂದರೆ
ಎಂದೊಡೆ ತಿಂದಂ
ಎಂದು ವಡೆ ತಿಂದಂ
ಎಂದು ಒಂದು ವಡೆ ತಿಂದಂ
ಎಂದು ಒಂದೊಂದೇ ವಡೆ ತಿಂದಂ!

ಈ ರೀತಿಯ ಲಲಿತ ಪ್ರಬಂಧಗಳಿದ್ದ ಆ ಪುಸ್ತಕ ಬಹಳ ನೆನಪಿಗೆ ಬರುತ್ತಿದೆ. ಪುಸ್ತಕದ ಹೆಸರು ನಿಮ್ಮಲ್ಲಿ ಯಾರಿಗಾದರೂ ನೆನಪಿಗೆ ಬಂದರೆ ದಯವಿಟ್ಟು ತಿಳಿಸಿ. ನಿಮ್ಮ ಬಳಿ ಆ ಪುಸ್ತಕ ಇದ್ದರೆ ದಯಮಾಡಿ ಕೊಡಿ. ಅದನ್ನು ಓದಿ, ಮರೆಯದೇ ಹಿಂದಿರುಗಿಸುವ ಭರವಸೆಯನ್ನು ನಾನು ಕೊಡುತ್ತೇನೆ.

ಈ ಬರಹ ಓದಿ ಏನೆಲ್ಲ ನೆನಪಾಯಿತು? ಪ್ರತಿಕ್ರಿಯಿಸಿ:
**feedback@sudha.co.in**